**ದಿ : 17-10-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ:- ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಎಸ್.ಎ ರವರಿಂದ**

1) ದಿನಾಂಕ **10-08-1918**ರ ನೊಂದಾಯಿತ ವಿಭಾಗ ಪತ್ರದ ಧೃಢಿಕೃತ ನಕಲು
2) ದಿನಾಂಕ **15-03-1930**ರ ನೊಂದಾಯಿತ ಕ್ರಯ ಪತ್ರದ ಧೃಢಿಕೃತ ನಕಲು
3) ನಿಗದಿತ ಅಮಲ್ಜಾಜರಿ ಅರ್ಜಿ ಸಂಖ್ಯೆ **788/1938**ರಲ್ಲಿ ಪಡೆದಿರುವ ಮಾರಾಟ ಪ್ರಮಾಣ ಪತ್ರ ಧೃಢಿಕೃತ ನಕಲು
4) ದಿನಾಂಕ **31-10-1987**ರ **ಐದು** ಕ್ರಯ ಪತ್ರಗಳ ಧೃಢಿಕೃತ ನಕಲು
5) ಅಸಲು ದಾವಾ ಸಂಖ್ಯೆ **375/1974**ರ ವಾದಪತ್ರದ ಧೃಢಿಕೃತ ನಕಲು
6) ಅಸಲು ದಾವಾ ಸಂಖ್ಯೆ **375/1974**ರ **ತೀರ್ಪು ಮತ್ತು ಡಿಕ್ರಿಯ** ಧೃಢಿಕೃತ ನಕಲುಗಳು
7) ಮೇಲ್ಮನವಿ ಸಂಖ್ಯೆ **122/1999**ರ **ತೀರ್ಪು ಮತ್ತು ಡಿಕ್ರಿಯ** ಧೃಢಿಕೃತ ನಕಲುಗಳು
8) ಅಮಲ್ಜಾರಿ ಅರ್ಜಿ ಸಂಖ್ಯೆ **47/2006**ರ ಆದೇಶಪುಟಗಳ ಧೃಢಿಕೃತ ನಕಲು
9) ಅಮಲ್ಜಾರಿ ಅರ್ಜಿ ಸಂಖ್ಯೆ **47/2006**ರಲ್ಲಿ ಸ್ವಾಧೀನ ನೀಡಲು ಕಳುಹಿಸಿದ ವಾರೆಂಟಿನ ಧೃಢಿಕೃತ ನಕಲು
10) ಅಮಲ್ಜಾರಿ ಅರ್ಜಿ ಸಂಖ್ಯೆ **47/2006**ರಲ್ಲಿ ಸ್ವಾಧೀನ ಪಡೆದುಕೊಂಡ ಬಗ್ಗೆ ಧನಕೋರನು ಬರೆದುಕೊಟ್ಟಿರುವ ರಶೀದಿಯ ಧೃಢಿಕೃತ ನಕಲು
11) ಅಮಲ್ಜಾರಿ ಅರ್ಜಿ ಸಂಖ್ಯೆ **47/2006**ರಲ್ಲಿ ಬೈಲಿಫ್ ರು ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯ ಧೃಢಿಕೃತ ನಕಲು
12) ಅಸಲು ದಾವಾ ಸಂಖ್ಯೆ **28/1999**ರಲ್ಲಿ ಹೊರಡಿಸಿರುವ **ಅಂತಿಮ ಡಿಕ್ರಿ** ಮತ್ತು ಸಲ್ಲಿಸಿದ **ನೊಂದಾಯಿಸಿದ್ದ ರಾಜಿಯ** ಧೃಢಿಕೃತ ನಕಲಗಳು
13) ದಿನಾಂಕ **28-07-2008**ರ ನೊಂದಾಯಿತ ವಿಭಾಗ ಪತ್ರದ ಧೃಢಿಕೃತ ನಕಲು
14) ದಿನಾಂಕ **27-09-2008**ರ ನೊಂದಾಯಿತ ವಿಭಾಗ ಪತ್ರದ ದುರಸ್ಥಿ ಪತ್ರದ ಧೃಢಿಕೃತ ನಕಲು

15) ದಿನಾಂಕ **23-06-2009**ರ ವಿಭಾಗ ಪತ್ರದ ನೊಂದಾಯಿತ ಒಪ್ಪಿಗೆ ಪತ್ರದ ಧೃಢಿಕೃತ ನಕಲು

16) ಕುಂದಾಪುರದ ಸಹಾಯಕ ಉಪವಿಭಾಗಾಧಿಕಾರಿಗಳು ಪ್ರಕರಣ ಸಂಖ್ಯೆ **103/2008-09**ರಲ್ಲಿ ಮಾಡಿದ ಆದೇಶದ ಧೃಢಿಕೃತ ನಕಲು

17) ಕುಂದಾಪುರದ ಸಹಾಯಕ ಉಪವಿಭಾಗಾಧಿಕಾರಿಗಳು ಪ್ರಕರಣ ಸಂಖ್ಯೆ **7/2011-12**ರಲ್ಲಿ ಮಾಡಿದ ಆದೇಶದ ಧೃಢಿಕೃತ ನಕಲು

18) ಉಡುಪಿ ಜಿಲ್ಲಾಧಿಕಾರಿಗಳು ಪ್ರಕರಣ ಸಂಖ್ಯೆ **9/2013-14**ರಲ್ಲಿ ಮಾಡಿದ ಆದೇಶದ ಧೃಢಿಕೃತ ನಕಲು

19) ಕುಂದಾಪುರ ತಾಲೂಕಿನ ವ್ಯಾಪ್ತಿಯ **2023-24**ನೇ ಸಾಲಿನ ಮಾರ್ಗಸೂಚಿ ದರಪಟ್ಟಿಯ ಧೃಢಿಕೃತ ನಕಲನ್ನು ಹಾಜರು ಮಾಡಿದ್ದೇನೆ.

ಸದರಿ ದಾಖಲೆಗಳನ್ನು ಕ್ರಮವಾಗಿ ನಿ.ಡಿ **- 1** ರಿಂದ **25** ಎಂದು ಗುರುತಿಸಲಾಯಿತು.

20) ದಿನಾಂಕ **11-09-1942**ರ ನೊಂದಾಯಿತ ಮರಣ ಶಾಸನವನ್ನು ಹಾಜರು ಮಾಡಿದ್ದೇನೆ.

ಆದ್ದರಿಂದ ದಾವೆಯನ್ನು ವಜಾ ಮಾಡಲು ಕೋರಿಕೊಳ್ಳುತ್ತೇನೆ.

ಪಾಟೀ **ಸವಾಲು :** ವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**